ಹೊಳೆನರಸೀಪುರದ ಅಪರ ಜೆ.ಎಂ.ಎಫ್.ಸಿ. ರವರ ನ್ಯಾಯಾಲಯದಲ್ಲಿ.

ಸಿ.ಸಿ. ನಂಃ **1014/2015**

| | | | |
|---|---|---|---|
| ಸಾಕ್ಷಿಯ ಹೆಸರು | ಃ ಶೈಲಾ ಆರ್ | ಸಿ.ಡಬ್ಲ್ಯೂ | ಃ 7 |
| ಗಂಡ ಹೆಸರು | ಃ ಬಸವರಾಜು | ಪಿ.ಡಬ್ಲ್ಯೂ | ಃ 6 |
| ವಯಸ್ಸು | ಃ 49 ವರ್ಷ | ಪ್ರಮಾಣೀಕರಿಸಿದ ದಿಃ | 06.07.2026 |
| ವೃತ್ತಿ | ಃ ಸ್ಟಾಫ್ ನರ್ಸ್ | | |
| ವಾಸ | ಃ ಹೊಳೆನರಸೀಪುರ | | |

ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ- ಮಾನ್ಯ ಎ.ಪಿ.ಪಿ.ಯವರಿಂದಃ

ಹೊಳೆನರಸೀಪುರದಲ್ಲಿ ಏಪ್ರಿಲ್ 2011 ರಿಂದ ಇಲ್ಲಿಯ ವರೆಗೆ ಹೊಳೆನರಸೀಪುರ ತಾಲ್ಲೂಕು ಆಸ್ಪತ್ರೆಯಲ್ಲಿ ಸ್ಟಾಫ್ ನರ್ಸ್ ಆಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

2015 ರಲ್ಲಿ ನಾನು ರಾತ್ರಿ ಪಾಳೆಯಲ್ಲಿ ಕರ್ತವ್ಯದಲ್ಲಿದ್ದಾಗ, ರಾತ್ರಿ 10.00 ರ ಮೇಲೆ ತುರ್ತು ಚಿಕಿತ್ಸಾ ವಿಭಾಗದಲ್ಲಿ ಗಲಾಟೆ ನಡೆಯುತ್ತಿತ್ತು. ಚಾ ಸಾ ,2, 4, 5, 6, 8 , ಮತ್ತು 9 ರವರು, ಕೆಲಸದಲ್ಲಿದ್ದಾಗ, ಗಲಾಟೆ ಸದ್ದು ನನಗೆ ಕೇಳಿಸಿತ್ತು. ನಾನು ಮೊದಲ ಮಹಡಿಯಿಂದ ಕೆಳಗಡೆ ಕೆಳಗಡೆ ತುರ್ತು ಚಿಕಿತ್ಸಾ ವಿಭಾಗಕ್ಕೆ ಬಂದಿದ್ದೆ. ಅಲ್ಲಿ ವಿಷ ಸೇವಿಸಿದ್ದ ಒಂದು ಪ್ರಕರಣ ಬಂದಿತ್ತು. ಎಲ್ಲ ಸಿಬ್ಬಂದಿ ಸೇರಿ ಚಿಕಿತ್ಸೆ ನೀಡುತ್ತಿದ್ದು, ರೋಗಿ ಕಡೆಯವರು ಬೇಗ ಬೇಗ ಚಿಕಿತ್ಸೆ ನೀಡುತ್ತಿಲ್ಲವೆಂದು ಸಿಬ್ಬಂದಿಯನ್ನು ಅವ್ಯಾಚ್ಯ ಶಬ್ದಗಳಿಂದ ಬೈದರು. ಆಗ ಚಾ ಸಾ 2 ರವರು ಗಲಾಟೆ ಮಾಡಬೇಡಿ ಚಿಕಿತ್ಸೆ ನಡೆಯುತ್ತಿದೆ ಎಂದು ಸಮಾಧಾನವಾಗಿರಿ ಎಂದು ಹೇಳಿದರು. ಆಗ ರೋಗಿ ಕಡೆಯವರು ಚಾ ಸಾ 2 ರವರ ಮೇಲೆ ಹಲ್ಲೆ ಮಾಡಿದ್ದರು ಎಂದು ನನಗೆ ತಿಳಿದು ಬಂದಿರುತ್ತದೆ. ಗಲಾಟೆ ಮಾಡಿದ್ದ ವ್ಯಕ್ತಿ ಯಾರು ಮತ್ತು ಅವರ ಹೆಸರು ಏನೆಂದು ನನಗೆ ಈಗ ಗೊತ್ತಿಲ್ಲ. ಎಲ್ಲಾ ಸಿಬ್ಬಂದಿ ಸೇರಿ ಚಾ ಸಾ 1 ರವರಿಗೆ ಮನವಿ ನೀಡಿರುತ್ತಾರೆ. ಆಮೇಲೆ ಏನಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ.

(ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಪ್ರತಿಕೂಲ ಭಾಗಶಃ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿರುತ್ತಾರೆ. ಕಲಂ 161 ಹೇಳಿಕೆಯನ್ನು ಪರಿಶಿಲೀಸಿ ಪಾಟಿ ಸವಾಲಿಗೆ ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ - ಮಾನ್ಯ ಎ.ಪಿ.ಪಿ. ರವರಿಂದಃ

ಗಲಾಟೆ ನಡೆದಿದ್ದು ದಿನಾಂಕ 27.01.2015 ರಂದು ಎಂದರೆ ಸರಿ. ಅಲ್ಲಿ 30 ವರ್ಷದ ಒಬ್ಬ ವ್ಯಕ್ತಿ ಮದ್ಯಪಾನ ಮಾಡಿಬಂದು ಗಲಾಟೆ ಮಾಡುತ್ತಿದ್ದನ್ನು ನಾನು ನೋಡಿದೆ ಎಂದರೆ ಸರಿಯಲ್ಲ. ಆ ವ್ಯಕ್ತಿಯು ಸಿಬ್ಬಂದಿಯನ್ನು ಕುರಿತು ಲೋಫರ್ ಮಂಡೇರಾ, ಲೋಫರ್ ನನ್ನ ಮಕ್ಕಳಾ ಎಂದು ಅವಾಚ್ಯ ಶಬ್ಬಗಳಿಂದ ಬೈದರು ಎಂದರೆ ಸರಿ. ಚಾ ಸಾ 2 ಆ ವ್ಯಕ್ತಿಗೆ ಏನಕ್ಕೆ ಬೈಯುತ್ತಿದ್ದೀರಾ ಎಂದು ಕೇಳಿದಾಗ ಆ ವ್ಯಕ್ತಿಯು ಚಾ ಸಾ 2 ರವರಿಗೆ ನೂಕಾಡಿ ಕೆನ್ನೆಗೆ ಹೊಡೆದು ಸರ್ಕಾರಿ ಕರ್ತವ್ಯಕ್ಕೆ ಅಡ್ಡಿ ಉಂಟುಮಾಡಿದರು ಎಂದರೆ ಸಾಕ್ಷಿ ಸರಿ ಎನ್ನುತ್ತಾರೆ. ಅಲ್ಲಿದ್ದವರನ್ನು ಸದರಿ ವ್ಯಕ್ತಿಯ ವಿವರ ಕೇಳಲಾಗಿ ಆ ವ್ಯಕ್ತಿಯ ಹೆಸರು ಮಂಜು ಮಲ್ಲಪ್ಪನಹಳ್ಳಿ ಗ್ರಾಮ ಎಂದು ತಿಳಿದು ಬಂದಿತ್ತು ಎಂದರೆ ಸರಿಯಲ್ಲ. ದಿನಾಂಕ 28.01.2015 ರಂದು ಚಾ ಸಾ 1 ರವರು ಈ ಬಗ್ಗೆ ಪ್ರಕರಣ

ದಾಖಲಿಸಿದ್ದು ನನಗೆ ತಿಳಿದು ಬಂದಿರುತ್ತದೆ. ದಿನಾಂಕ 08.02.2015 ರಲ್ಲಿ ನಾನು ಗಲಾಟೆ ಮಾಡಿದ ವ್ಯಕ್ತಿಯನ್ನು ಮತ್ತೆ ನೋಡಿದರೆ ಗುರುತಿಸುತ್ತೇನೆ ಎಂದು ಹೇಳಿಕೆ ನೀಡಿದ್ದೆ ಎಂದರೆ ಸರಿಯಲ್ಲ. ಸಾಕ್ಷಿಯ ಕಲಂ 161 ರ ಹೇಳಿಕೆಯನ್ನು ನಿ ಪಿ 5 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ - ಆರೋಪಿ ಪರ ಶ್ರೀ ಹೆಚ್ ಟಿ ಆರ್ ವಕೀಲರಿಂದಃ</u>

ಗಲಾಟೆ ನಡೆಯುತ್ತಿದ್ದಾಗ ನಾನು ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿ. ನಾನು ಕೆಲಸ ಮಾಡುತ್ತಿದ್ದ ಮಕ್ಕಳ ವಾರ್ಡಿನಿಂದ ತುರ್ತು ಚಿಕಿತ್ಸಾ ವಿಭಾಗಕ್ಕೆ ಸುಮಾರು 50 ಮೀಟರ್ ಅಂತರವಿರಬಹುದು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಪೊಲೀಸ್ ಠಾಣೆಗೆ ಹೋಗಿಲ್ಲ. ನಾನು ಸ್ಥಳಕ್ಕೆ ಬಂದಾಗ ಸುಮಾರು 10 ಜನ ಸಾರ್ವಜನಿಕರು ಅಲ್ಲಿ ಇದ್ದರು. ಅವರು ಅವರ ಊರು ಮತ್ತು ವಿಳಾಸ ನನಗೆ ಗೊತ್ತಿಲ್ಲ. ಯಾವುದೇ ಗಲಾಟೆ ಆಗಿಲ್ಲ, ನಾನು ನನ್ನ ಮೇಲಾಧಿಕಾರಿಗಳ ಮಾತು ಕೇಳಿ, ನನಗೆ ಈ ಪ್ರಕರಣದ ಯಾವ ಅಂಶಗಳು ತಿಳಿಯದೆ ಇದ್ದರೂ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಮುಕ್ತಾಯಃ

<u>ಮರು ವಿಚಾರಣೆ ಇಲ್ಲಃ</u>

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ.ಸ.ಇ.**

1ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ,

ಹೊಳೆನರಸೀಪುರ